ಇವರೆಲ್ಲರ ಬದುಕಿನ ಬಗ್ಗೆ ಬರೆಯಲು ಹೋದರೆ ಅದೊಂದು ದೊಡ್ಡ ಕಾದಂಬರಿಯೇ ಆದೀತು.

ತಮಿಳುನಾಡಿನ ಒಬ್ಬ ಬಟ್ಟೆ ವ್ಯಾಪಾರಿಯಂತೂ ತನ್ನೆಲ್ಲಾ ದಂಧೆ ಬಿಟ್ಟು ಬಂದಿದ್ದಾನೆ. ಒಂದೇ ಹುಲಿಯನ್ನು ಈತ ಅದೆಷ್ಟು ಸಲ ನೋಡಿದ್ದಾನೋ! ದೇವರೇ ಬಲ್ಲ. ಆದರೂ ಇವನಿಗೆ ಬೇಸರ ಎಂಬುದಾಗಿಲ್ಲ. ಬಿಟ್ಟರೆ ಅವುಗಳ ಜೊತೆಗೇ ವಾಸ ಮಾಡಬಲ್ಲ. ಕಬಿನಿಯ ಹುಲಿಗಳ ಅವ್ವ, ಅಜ್ಜಿ, ಚಿಕ್ಕವ್ವ, ತಂಗಿ, ಅಪ್ಪ ತಮ್ಮ, ಅಣ್ಣ, ಸೋದರ ಮಾವ ಯಾರು? ಯಾರು ಯಾರಿಗೆ ಯಾವಾಗ ಹುಟ್ಟಿದರು! ಎಲ್ಲಾ ಇವನಿಗೆ ಗೊತ್ತು. ಮತ್ತೊಬ್ಬ ಗಡ್ಡ ಬಿಟ್ಟ ಹುಲಿ ಜ್ಯೋತಿಷಿ ಇಲ್ಲಿದ್ದಾನೆ. ಪ್ರತಿ ಹುಲಿಯ ಗುಣಸ್ವಭಾವ ಈತ ನುಡಿಯಬಲ್ಲ. ಹುಲಿಗಳ ಸುಖದುಃಖ, ಬೇಸರ, ಸರಸ, ವಿರಸ ಎಲ್ಲವೂ ಇವನಿಗೆ ಗೊತ್ತು. ಪ್ರತಿ ಹುಲಿಯ ಸಂಸಾರದ ಸಮಸ್ಯೆಗಳೆಲ್ಲಾ ತಿಳಿಯಾಗಿ ಹೇಳಬಲ್ಲ.

ಹೆಚ್ಚು ಮಾತಾಡದ ತಣ್ಣಗೆ ಸಿಗರೇಟು ಸೇದುತ್ತಾ ಇರುವ ಮೌನಿ ಬಾಬ ಒಬ್ಬನ ಗೆಳೆತನ ಹುಡುಕಿಕೊಂಡೆ. ಅವನದು ಗಂಟೆಗೊಂದು ಮಾತು. ನನ್ನ ತಾಳ್ಮೆ ತಪ್ಪಿದರೂ ಆತನ ಕಷ್ಟಬಿದ್ದು ಒಲಿಸಿಕೊಂಡೆ. ಒಂದು ವರ್ಷದ ಪರಿಚಯದ ನಂತರ ಆತನಿಗೆ ನನ್ನಲ್ಲಿ ನಂಬಿಕೆ ಹುಟ್ಟಿತು. ಪ್ರತಿ ಹುಲಿಯ ಮುಖದ ಮೇಲಿನ ಪಟ್ಟೆಗಳ ವೈಶಿಷ್ಟ್ಯತೆ ಹೇಗೆ ಗಮನಿಸಬೇಕು ಎಂಬುದನ್ನು ಆತ ಕಲಿಸಿದ. ಹೇಳಿದ್ದರಲ್ಲಿ ಸುಳ್ಳೆಷ್ಟೋ ನಿಜವೆಷ್ಟೋ ಖಂಡಿತಾ ಗೊತ್ತಿಲ್ಲ? ಇವನ ಹುಲಿ ಜ್ಞಾನ ನೋಡಿ ನಾನಂತೂ ಗಾಬರಿ ಬಿದ್ದಿದ್ದೇನೆ.

ಇನ್ನೊಬ್ಬ ಸಿಕ್ಕ. ವಿಕ್ಷಿಪ್ತ ವ್ಯಕ್ತಿ. ಹುಲಿ ಪಟ ತೆಗೆಯುವ ತೆವಲಿಗೆ ಬಿದ್ದು ಚೆಂದದ ತನ್ನ ಸಂಸಾರಕ್ಕೆ ಎಳ್ಳುನೀರು ಬಿಟ್ಟವನು. ಸದಾ ಹೆಣ್ಣು ಹುಲಿಗಳ ಅಂದಚೆಂದ ಅದರ ಶಕ್ತಿ, ಸಾಮರ್ಥ್ಯಗಳ ಮೇಲೆಯೇ ಮಾತಾಡಿ ತಲೆ ತಿನ್ನುತ್ತಾನೆ. ಇವನ ಕಾಟ ತಡೆಯಲಾರದೆ ಪತ್ನಿ ಮಗುವಿನ ಸಮೇತ ಮನೆ ತೊರೆದು ಹೋಗಿದ್ದಾಳೆ. ಈ ಕ್ಷಣಕ್ಕೂ ಅವನಿಗೂ ಈ ಬಗ್ಗೆ ಬೇಸರ ಎನಿಸಿಲ್ಲ. ಭಾರತದ ಮೂಲೆ ಮೂಲೆಯ ಕಾಡು ತಿರುಗಿ ಅವನು ಸಂಗ್ರಹಿಸಿರುವ ಹುಲಿ ಚಿತ್ರಗಳ ಭಂಡಾರ ಬಲು ದೊಡ್ಡದಿದೆ. 'ಇರಬೇಕು ಹುಲಿ ಚಟ. ಆದರೆ ಈ ಲೆವೆಲ್ಲಿಗಲ್ಲ' ಎಂದು ಅವನಿಗೆ ಎಷ್ಟು ವಿವರಿಸಿದರೂ ಅರ್ಥವಾಗುವುದಿಲ್ಲ. ನನ್ನ ಪರಿಸರ ಪ್ರೀತಿಯನ್ನೇ



ಹೆಂಡತಿ ಅರ್ಥ ಮಾಡಿಕೊಂಡಿಲ್ಲ ಎಂದು ಆ ಹೆಣ್ಣು ಮಗುವನ್ನೇ ದೂರುತ್ತಾನೆ. ಹೆಣ್ಣು ಹುಲಿ ಕೂಡ ಮಕ್ಕಳನ್ನು ಹಡೆದ ನಂತರ ಗಂಡನ ಕ್ರೂರ ನಡವಳಿಕೆಗೆ ಹೆದರಿ ಮಕ್ಕಳನ್ನು ಬಾಚಿಕೊಂಡು ದೂರ ಓಡುತ್ತದೆ. ತನ್ನ ಮರಿಗಳನ್ನು ಗಂಡು ಖಂಡಿತಾ ಹೊಡೆದು ಹಾಕುತ್ತದೆ ಎಂಬುದು ಆಕೆಗೆ ಗೊತ್ತು. ಹೆಣ್ಣುಹುಲಿಯ ಈ ನಡವಳಿಕೆ ಪ್ರಕೃತಿ ಸಹಜವಾದದ್ದು. ಆದರೆ ಅತೀವ ತಿಕ್ಕಲು ಹಚ್ಚಿಕೊಂಡು ಹುಲಿಗಳ ಬೆನ್ನು ಬಿದ್ದಿರುವ ಇವನ ಸಂಸಾರದಲ್ಲೂ ಇಂಥದ್ದೇ ಕಥೆ ಘಟಿಸಿರುವುದನ್ನು ಇವನು ಪರಿಸರ ಸಹಜ ಪ್ರಕ್ರಿಯೆ ಎಂದು ವ್ಯಾಖ್ಯಾನಿಸುತ್ತಾನೆ.

ಮತ್ತೆ ಮತ್ತೆ ಕಾಡಿಗೆ ಹೋಗಿ ಅದೇ ಹುಲಿಗಳನ್ನು ನೋಡುವುದು ಒಂದು ಹಂತಕ್ಕೆ ನಿಲ್ಲಬೇಕು. ಕೊನೇ ಪಕ್ಷ ನೋಡುವ ಹಂಬಲವಾದರೂ ಕೊಂಚ ತಗ್ಗಬೇಕು. ಆದರೆ ಕೆಲವರ ತಲಬು ಮುಗಿಯುವುದೇ ಇಲ್ಲ. ಇನ್ನೂ ಹೆಚ್ಚಾಗುತ್ತಲೇ ಹೋಗುತ್ತದೆ. ತೀರಾ ಅತಿಯಾಗಿ ಹೀಗೆ ಪ್ರಾಣಿ– ಪಕ್ಷಿಗಳ ಹುಡುಕಾಟದಲ್ಲಿ ಬಿದ್ದವರ ಸಂಸಾರದ ಕಥೆ ಏನಾಗಿರಬಹುದು ಎಂದು ಯೋಚಿಸುವುದಕ್ಕೂ ಈಗ ಹೆದರಿಕೆಯಾಗುತ್ತದೆ. ●